। ಹರಿಃ ಓಂ ।

# ಬಿಡೆ ನಿನ್ನ ಪಾದವ ಬಿಂಕವದೇಕೊ

ಬಿಡೆ ನಿನ್ನ ಪಾದವ ಬಿಂಕವದೇಕೊ
ಕೊಡು ಮನದಿಷ್ಟವ ಕೋಪ ವಿದೇಕೊ
ನೀರ ಹೊಕ್ಕರು ಬಿಡೆ ಬೆನ್ನಿನೊಳಗೆ ಬಹು
ಭಾರ ಪೊತ್ತೆನೆಂದು ಬಿದ್ದರು ಬುಡೆನು
ಕೋರೆಯ ಮಸೆಯುತ ಕೆಸರು ಕೊಂಡರು
ಬಿಡೆನು ಘೋರ ರೂಪವ ತಾಳಿ ಘುರಿ ಘುರಿಸಲು ನಾನು
ತಿರುಕನೆಂದು ಬಿಡೆ ತಿಳಿಯ ತಾಯಕೊರಳ
ತರಿವನೆಂದರು ನಿನ್ನ ನಾ ಬಿಡೆನೋ
ಪೊರೆಯೆ ಪಿತನ ವಾಕ್ಯ ಕಾಡ ಸೇರಲು ಬಿಡೆ
ದುರುಳ ಮಡುವಿನಲ್ಲಿ ಧುಮುಕಿದರೆಯು ನಾನು
ಕಡು ಬತ್ತಲಾಗಿ ಎನ್ನ ಕೈಲಿ ಕಾಸಿಲ್ಲೆಂದರು
ಒಡನೆ ಹಯವೇರಿ ಓಡಿದರು ಬಿಡೆನು
ಪೊಡವಿಯೊಳಗೆ ನಮ್ಮ ಪುರಂದರವಿಟ್ಠಲನ
ಕಡೆಹಾಯಿಸುವ ಭಾರ ನಿನ್ನದಕೆ ನಾನು

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

# ಧರ್ಮಕ್ಕೆ ಕೈ ಬಾರದೀ ಕಾಲ

ಧರ್ಮಕ್ಕೆ ಕೈ ಬಾರದೀ ಕಾಲ
ಪಾಪ ಕರ್ಮಕ್ಕೆ ಮನಸೋಲೋದಿ ಕಲಿ ಕಾಲ
ದಂಡ ದ್ರೋಹಕೆ ಉಂಟು ಪುಂಡು ಪೋಕರಿಗುಂಟು
ಹೆಂಡತಿ ಮಕ್ಕಳಿಗಿಲ್ಲವೀ ಕಾಲ
ದಿಂಡೇರಿಗುಂಟು ಜಗಭಂಡರಿಗುಂಟು
ಅಂಡಲೆವರಿಗಿಲ್ಲವೀ ಕಾಲ

ಮತ್ತೆ ಸುಳ್ಳರಿಗುಂಟು ನಿತ್ಯ ಹಾದರಕ್ಕುಂಟು
ಉತ್ತಮರಿಗಿಲ್ಲವೀ ಕಾಲ
ತೋತ್ತೇರಿಗುಂಟು ತಾಟಕಿಗುಂಟು
ಹೆತ್ತತಾಯಿಗಿಲ್ಲವೀ ಕಾಲ
ಹುಸಿ ದಟವಾಯಿತು ರಸ ಕಸವಾಯಿತು
ಸೊಸೆ ಅತ್ತೆಯ ದಂಡಿಸೋದೀ ಕಾಲ
ಬಿಸಜಾಕ್ಷ ಪುರಂದರವಿಟ್ಠಲನ ಮನದಲ್ಲಿ
ಸ್ತುತಿಸುವವರಿಗಿಲ್ಲವೀ ಕಾಲ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ದಾಸನ ಮಾಡಿಕೋ ಎನ್ನ ಸ್ವಾಮಿ

ದಾಸನ ಮಾಡಿಕೋ ಎನ್ನ ಸ್ವಾಮಿ
ಸಾಸಿರ ನಾಮದ ವೆಂಕಟ ರಮಣಾ
ದುರುಬುದ್ಧಿಗಳನೆಲ್ಲ ಬಿಡಿಸೋ
ನಿನ್ನ ಕರುಣ ಕವಚವೆನ್ನ ಹರಣಕ್ಕೆ ತೊಡಿಸೊ
ಚರನ ಸೇವೆ ಎನಗೆ ಕೊಡಿಸೊ
ಅಭಯಕರ ಪುಷ್ಪವೆನ್ನಯ ಶಿರದಲಿ ಮುಡಿಸೋ
ದೃಢ ಭಕ್ತಿನಿನ್ನಲ್ಲಿ ಬೇಡಿ ನಾ
ನಡಿಗೆರಗುವೆನಯ್ಯಾ ಅನುದಿನ ಪಾಡಿ
ಕಡೆಗಣ್ಣಲೇಕೆನ್ನ ನೋಡಿ ಬಿಡುವೆ
ಕೊಡು ನ್ನಿನ ಧ್ಯಾನವ ಮನ ಶುಚಿಮಾಡಿ
ಮೊರೆಹೊಕ್ಕವರ ಕಾವ ಬಿರುದು
ಎನ್ನ ಮರೆಯದೆ ರಕ್ಷಣೆಮಾಡಯ್ಯಾ ಪೊರೆದು
ದಿರಿತಗಳೆಲ್ಲವ ತರಿದು
ಸಿರಿ ಪುರಂದರವಿಟ್ಠಲ ಎನ್ನನು ಪೊರೆದು

। ಶ್ರೀ ಕೃಷ್ಣಾರ್ಪಣ ಮಸ್ತು ।

।ಹರಿಃ ಓಂ।

## ಈಸಬೇಕು ಇದ್ದು ಜೈಸಬೇಕು

ಈಸಬೇಕು ಇದ್ದು ಜೈಸಬೇಕು
ಹೇಸಿಗೆ ಸಂಸಾರದಲ್ಲಿ ಆಸೆ ಲೇಶ ಇಡದ್ಹಾಂಗೆ
ತಾಮರಸ ಜಲದಂತೆ ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮನೆನುತ ಪಾಡಿ
ಕಾಮಿತ ಕೈಗೊಂಬರೆಲ್ಲ
ಗೇರುಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ
ಮೀರಿಯಾಸೆ ಮಾಡದಲೆ
ಧೀರ ಕೃಷ್ಣನ  ಭಕುತರೆಲ್ಲ
ಮಾಂಸದಾಸೆಗೆ ಮತ್ಸ್ಯ ಸಿಲುಕಿ
ಹಿಂಸೆ ಪಡುವ ಪರಿಯೊಳು
ಮೋಸ ಹೋಗದ್ಹಾಂಗೆ ಜಗ
ದೀಶ ಪುರಂದರ ವಿಟ್ಠಲನ ನೆನೆದು

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಕಲಿಯುಗದ ಮಹಿಮೆಯು ಕಾಣಬಂತೀಗ

ಕಲಿಯುಗದ ಮಹಿಮೆಯು ಕಾಣಬಂತೀಗ
ಆಲಜಾಕ್ಷ ಮೇಲ್ಗಿರಿಯ ಶ್ರೀ ವೆಂಕಟೇಶ
ಹರಿಕಥೆಯನೆ ಬಿಟ್ಟು ಹೀನ ನುಡಿ ನುಡಿಯುವರು
ಗುರು ಹಿರಿಯರ ದೂಷಿಸಲು ಎಣಿಸುವರು
ಪೊರೆದ ತಾಯ್ತಂದೆಗಳ ಮಾತುಗಳ ಮನ್ನಿಸದೆ
ತರುಣಿಯರ ನಿಡಿಗೇಳಲಿಚ್ಛಿಸುತ್ತಿಹರು
ಪಟ್ಟದರಸಿಯ ಬಿಟ್ಟು ಪರಸತಿಯ ಬಯಸುವರು
ಕೊಟ್ಟ ಸಾಲವ ನುಂಗಿ ಕೊಳಲೆಣಿಪರು
ಮುಟ್ಟಿ ಭಾಷೆಯ ಕೊಟ್ಟು ಮೋಸವನೆ ಮಾಡುವರು

ಬಿಟ್ಟು ಪರದೈವವನು ಮಾರಿಗೆರಗುವರು
ಕಂಡುದನು ಹೇಳರು ಕಾಣದನು ಪೇಳುವರು
ಉಂಡ ಮನೆಗೆರಡು ಬಗೆಯುತ್ತಲಿಹರು
ಕೊಂಡಾಡಿ ಬೇಡಿದರೆ ಕೊಡರೊಂದು ರುವ್ವಿಯನು
ದಂಡಿಸಿ ಕೇಳಿದರೆ ಧನವ ಕೊಡುತಿಹರು
ಕಳ್ಳರೊಳು ಅತಿಸ್ನೇಹ ಸುಳ್ಳರೊಳು ಸೋಲುವರು
ಒಳ್ಳೆಯವರೊಡನೆ ವಂಚನೆ ಮಾಡುವರು
ಇಲ್ಲದ ಅನಾಥರಿಗೆ ಇಷ್ಟೊಂದವಿಕ್ಕರು
ಬಲ್ಲಿದರೆ ಬಾಯಿಸವಿಯನುಣಿಸುವರು
ಮಾಡಿದುಪಕಾರವನು ಮರೆತುಕೊಂಬರು ಮತ್ತೆ
ಕೊಡಲೇ ಕಾದುವರು ಕಪಟತ್ವದಿಂದ
ರೂಢಿಯೊಳಗೆ ನಮ್ಮ ಪುರಂದರವಿಟ್ಠಲನ್ನ
ಪಾಡಿಪೊಗಳುವರಿಗಿನ್ನಾರ ಭಯವಿಲ್ಲ

। ಶ್ರೀ ಕೃಷ್ಣಾರ್ಪಣ ಮಸ್ತು ।

## ಕಂಡೆ ನಾ ಗೋವಿಂದನ

ಕಂಡೆ ನಾ ಗೋವಿಂದನ
ಪುಂಡರೀಕಾಕ್ಷ ಪಾಂಡವಪಕ್ಷ ಕೃಷ್ಣನ
ಕೇಶವ ನಾರಾಯಣ ಶ್ರೀಕೃಷ್ಣನ
ವಾಸುದೇವ ಅಚ್ಯುತಾನಂತನ
ಸಾಸಿರ ನಾಮದ ಶ್ರೀ ಹೃಷೀಕೇಶನ
ಶೇಷಶಯನ ನಮ್ಮ ವಸುದೇವ ಸುತನ
ಮಾಧವ ಮಧುಸೂದನ ತ್ರಿವಿಕ್ರಮನ
ಯಾದವಕುಲವಂದ್ಯನ
ವೇದಾಂತ ವೇದ್ಯನ ಇಂದಿರಾರಮಣನ
ಆದಿ ಮೂರುತಿ ಪ್ರಹ್ಲಾದವರದನ
ಪುರುಷೋತ್ತಮ ನರಹರಿ ಶ್ರೀಕೃಷ್ಣನ
ಶರಣಾಗತ ರಕ್ಷಕನ
ಕರುಣಾಕರ ನಮ್ಮ ಪುರಂದರವಿಟ್ಠಲನ

ನೆರೆ ನಂಬಿದೆನು ಬೇಲೂರ ಚೆನ್ನಿಗನ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಕೇಳಿದೆ ನಿನ್ನಯ ಸುದ್ದಿ ಕೇಳಿದೆ

ಕೇಳಿದೆ ನಿನ್ನಯ ಸುದ್ದಿ ಕೇಳಿದೆ
ನೀರೊಳು ಮುಳುಗಿದಿಯಂತೆ ದೊಡ
ಭಾರ ಗಿರಿಯ ಪೊತ್ತೆಯಂತೆ ಗಡ್ಡೆ
ಬೇರು ಗೆಣಸ ಮೆದ್ದೆಯಂತೆ ಆಹಾ
ಮೂರೆರಡರಿಯದ ತರ ಮಾತಿಗೆ
ಘೋರ ದಾನವನ ಸಂಹಾರ ಮಾಡಿದೆಯಂತೆ
ನಾರಿಯೊಬ್ಬಳ ಪೆತ್ತೆಯಂತೆ
ಹೆತ್ತ ನಾರಿಯನು ಕೊಯ್ದೆಯಂತೆ ನಿನ್ನ
ನಾರಿಚೋರನ ಕೊಂದೆಯಂತೆ ಆಹಾ
ಊರ ನಾರಿಯರ ಸೊರೆಗೊಳ್ಳುತ ಪರ
ನಾರಿಯರಭಿಮಾನ ಗಾರು ಮಾಡಿದೆಯಂತೆ
ತುರುಗ ರಾಹುತನಾದೆಯಂತೆ ನಿನ್ನ
ಕರದಿ ಕುಡಗೋಲು ನೇಣಂತೆನಿನಗೆ
ಸರಿ ಧರೆಯೊಳಗ್ಗಿಲ್ಲವಂತೆ ಆಹಾ
ವರದ ಶ್ರೀಪುರಂದರವಿಟ್ಠಲನೆ ನಿನ್ನ ಈ
ಪರಿಪರಿ ಮಹಿಮೆಯ ಹರಿಸಿಸುತಲಿ ನಾನು

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ

ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ
ಕಷ್ಟಗಳೆಲ್ಲವ ಪರಿಹರಿಸಿ ಮನದಿಷ್ಟಾರ್ಥಗಳನೆಲ್ಲ ಕೊಟ್ಟು ರಕ್ಷಿಸುವಂಥ
ಮಸ್ತಕದಲಿ ಮಾಣಿಕದ ಕಿರೀಟ
ಕಸ್ತೊರಿ ತಿಲಕದಿಂದೆಸವ ಲಲಾಟ
ಶಿಸ್ತೀಲಿ ಕೊಳಲ ನೊಡುವೆ ಓರೆ ನೋಟ
ಕೌಸ್ತುಭ ಎಡಬಲದಲಿ ಓಲಾಟ
ಘಮಘಮಿಸುವ ಸೊಬಜಿನ ಸುಳಿಗುರುಳು
ಚಿಗುರು ತುಲಸಿ ವನಮಾಲೆಯು ಕೊರಳ
ಬಗೆಬಗೆಯ ಹೊನ್ನುಂಗುರವಿಟ್ಟ ಬೆರಳು
ಸೊಗಸಿನ ನಾಭಿಯ ತಾವರೆಯುರಳು
ಉಡದಾರ ಒಡ್ಯಾಣ ನಿಖಿಲಾಭರಣ
ಉಡುಗೆ ಪೀತಾಂಬರ ರವಿ ಶೀತ ಕಿರಣ
ಕಡಗ ನೂಪುರ ಗೆಜ್ಜೆಗಳ ನಿಟ್ಟ ಚರಣ
ಒಡೆಯ ಶ್ರೀಪುರಂದರವಿಟ್ಠಲನ ಕರುಣ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಮಾನವ ಜನ್ಮ ದೊಡ್ಡದು

ಮಾನವ ಜನ್ಮ ದೊಡ್ಡದು ಹಾನಿ ಮಾಡಬೇಡಿರಿ ಹುಚ್ಚಪ್ಪಗಳಿರಾ
ಕಣ್ಣು ಕೈಕಾಲು ಕಿವಿ ನಾಲಿಗೆ ಇರಲ್ಕೆ ಮಣ್ಣು ಮುಕ್ಕಿ ಹುಚ್ಚರಾಗುವರೆ
ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ ಉಣ್ಣದೆ
ಉಪವಾಸ ಇರುವರೆ ಖೋಡಿ
ಕಾಲನ ದೂತರು ಕಾಲ್ಪಿಡಿದೆಳೆವಾಗ
ತಾಳು ತಾಳೆಂದರೆ ತಾಳುವರೆ
ದಾಳಿ ಬಾರದ ಮುನ್ನ ಧರ್ಮವ ಗಳಿಸಿರೊ

ಹಾಳು ಸಂಸಾರ ಸುಳಿಗೆ ಸಿಕ್ಕಲು ಬೇಡಿ
ಏನು ಕಾರಣ ಯದುಪತಿಯನುಮರೆತಿರಿ
ಧನ ಧಾನ್ಯ ತಂತ್ರರು ಕಾಯುವರೆ
ಇನ್ನಾದರೂ ಏಕೋಬಾವದಿ ಭಜಿಸಿರೊ
ಚಿಂನ್ನ ಶ್ರೀಪುರಂದರವಿಟ್ಠಲರಾಯನ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ನಾ ನಿನ್ನೊಳನ್ಯ ಬೇಡುವದಿಲ್ಲ

ನಾ ನಿನ್ನೊಳನ್ಯ ಬೇಡುವದಿಲ್ಲ
ಎನ್ನ ಹೃದಯ ಕಮಲದೊಳು ನಿಂದಿರು ಹರಿಯೇ
ಕರ್ಣ ಗೀತಂಗಳ ಕೇಳಲಿ ನಿನ್ನ ನಿರ್ಮಾಲ್ಯ ನಾಶಿಕವಾಘ್ರಾಣಿಸಲಿ ಹರಿಯೆ
ನಾಲಿಗೆ ನಿನ್ನ ಕೊಂಡಾಡಲಿ ಎನ್ನ
ಕರಗಳೆರಡು ನಿನ್ನನರ್ಚಿಸಲಿ ಹರಿಯೆ
ಚರಣ ತೀರ್ಥಯಾತ್ರೆ ಮಾಡಲಿ ಎನ್ನ
ಮನ ಅನುದಿನ ನಿನ್ನ ಸ್ಮರಿಸಲಿ ಹರಿಯೆ
ಬುದ್ಧಿ ನಿನ್ನೊಳು ಬೆರತೋಗಲಿ ಎನ್ನ
ಚಿತ್ತ ನಿನ್ನೊಳು ಸ್ಥಿರವಾಗಲಿ ಹರಿಯೆ
ಭಕ್ತ ಜನರ ಸಂಗವಾಗಲಿ ಶ್ರೀಪುರಂದರವಿಟ್ಠಲನೇ ಇಷ್ಟು ದಯಮಾಡು ಹರಿಯೆ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ನಗೆಯು ಬರುತಿದೆ ಎನಗೆ

ನಗೆಯು ಬರುತಿದೆ ಎನಗೆ ನಗೆಯು ಬರುತಿದೆ
ಜಗದೊಳಗಿರುವ ಮನುಜರೆಲ್ಲ ಹಗರಣ ಮಾಡುವದ ಕಂಡು
ಪರರ ವನಿತೆಯೊಲುಮೆ ಗೊಲಿದು ಹರುಷದಿಂದ ಅವಳ ಬೆರೆದು

ಹರಿವ ನೀರಿನೊಳಗೆ ಮುಳುಗಿ ಬೆರಳ ಎಣಿಸುತಿಹರ ಕಂಡು
ಪತಿಯಸೇವೆ ಬಿಟ್ಟು ಪರ ಪತಿಯ ಕೂಡಿ ಸರಸವಾಡೆ
ಸತತ ವ್ಯೈಯ ತೊಳೆದು ಹಲವು ವ್ರತವ ಮಾಳ್ಪ ಸತಿಯ ಕಂಡು
ಕಾಮ ಕ್ರೋಧ ಮನದೊಳಿಟ್ಟು ತಾನು ವಿಷಯ ಲಂಪಟಾಗಿ
ಸ್ವಾಮಿ ಪುರಂದರ ವಿಟ್ಠಲನ ನಾಮ ನೆನೆಯದವರ ಕಂಡು

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ನಂಬದಿರು ಈ ದೇಹ ನಿತ್ಯವಲ್ಲಾ

ನಂಬದಿರು ಈ ದೇಹ ನಿತ್ಯವಲ್ಲಾ
ಅಂಬುಜಾಕ್ಷನ ಭಜಿಸಿ ಸುಖಿಯಾಗು ಮನವೆ
ಎಲವು ರಕ್ತ ಮಾಂಸಗಳ ಮೇಲೆ ಚರ್ಮದ ಹೊದಿಕೆ
ಒಳಗೆ ಮಲ ಮೂತ್ರಾದಿ ಕ್ರಿಮಿಗಳಿಹವು
ಹಲವು ವ್ಯಾಧಿಯ ಬಿಡು ಪಂಚಭೂತದ ನಾಡು
ಬಲಹು ದೇಹವ ನೆಚ್ಚಿ ಕೆಡಬೇಡ ಮನುಜ
ಸತಿಸುತರು ಹಿತರೆಂದು ಮತಿ ಮರೆತು ಮಮತೆಯಲಿ
ಅತಿಕಾಂಕ್ಷೆಯಿಂದ ದುರ್ವಿಷಯ ಬಲಿದು
ಸತತ ಲಕ್ಷ್ಮೀಪತಿಯ ಶರಣೆನದೆ ಇಹಪರದ
ಹತಿಶೊನ್ಯವಾಗಿ ನೀ ಕೆಡಬೇಡ ಮನುಜ
ಪರರ ನಿಂದಿಸದೆ ಪರವಧುಗಳನು ಬಯಸದೆ
ಗುರುವಿಪ್ರ ಸೇವೆಯನು ಮಾಡು ಬಿಡದೆ
ಹರಿಸ್ತುತಿಯ ನೀ ಕೇಳು ಹರಿಕೀರ್ತನೆಯ ಮಾಡು
ಸಿರಿ ಪುರಂದರವಿಟ್ಠಲನೊಲಿದು ಪಾಲಿಸುವ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

# ನರನಾದ ಮೇಲೆ ಹರಿನಾಮ

ನರನಾದ ಮೇಲೆ ಹರಿನಾಮ ಜಿಹ್ವೆಯೊಳಿರಬೇಕು
ಭೂತ ದಯಾಪರನಾಗಿರಬೇಕು
ಪಾತಕವೆಲ್ಲ ಕಳೆಯಲು ಬೇಕು
ಮಾತುಮಾತಿಗೆ ಹರಿಯೆನ್ನಬೇಕು
ಆರು ವರ್ಗವ ನಳಿಯಬೇಕು
ಮೂರು ಗಣಂಗಳು ಮೀರಲು ಬೇಕು
ಸೇರಿ ಬ್ರಹ್ಮನೊಳಿರ ಬೇಕು
ಅಷ್ಟ ಮದಂಗಳ ತಿಳಿಯಲು ಬೇಕು
ದುಷ್ಟರ ಸಂಗವ ಬಿಡಲುಬೇಕು
ಕೃಷ್ಣ ಕೇಶವ ಎನ್ನ ಬೇಕು
ವೇದ ಶಾಸ್ತ್ರವನೋದಲು ಬೇಕು
ಭೇದಹಂಕಾರವ ನೀಗಲು ಬೇಕು
ಮಾಧವ ಸ್ಮರಣೆಯೊಳಿರಬೇಕು
ಶಾಂತಿ ಕ್ಷಮೆ ದಯೆ ಪಿಡಿಯಲು ಬೇಕು
ಭ್ರಾಂತಿ ಕ್ರೋಧನ ಕಳೆಯಲು ಬೇಕು
ಸಂತರ ಸಂಗದಿ ರತಿಯಿರಬೇಕು
ಗುರುವಿನ ಚರಣಕ್ಕೆರಗಲು ಬೇಕು
ತರುಂಓಪಾಯವನರಿಯಲು ಬೇಕು
ವಿರಕ್ತಿ ಮಾರ್ಗದಲಿರ ಬೇಕು
ಬಂದದ್ದುಂಡು ಸುಖಿಸಲು ಬೇಕು
ನಿಂದಾಸ್ತುತಿಗಳ ತಾಳಲು ಬೇಕು
ತಂದೆ ಪುರಂದರವಿಟ್ಠಲನ ನೆನೆಯಬೇಕು

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ನರಸಿಂಹ ಮಂತ್ರವೊಂದಿರಲು ಸಾಕು

ನರಸಿಂಹ ಮಂತ್ರವೊಂದಿರಲು ಸಾಕು
ದುರಿತ ಕೋಟಿಯು ತರಿದು ಭಾಗ್ಯವನ್ನು ಕೊಡುವ
ಶಿಶುವಾದ ಪ್ರಲ್ಹಾದನ ಬಾಧೆ ಬಿಡಿಸಿದ ಮಂತ್ರ
ಅಸುರ ಕುಲದವರಿಗೆ ಶತೃ ಮಂತ್ರ
ವಸುಧಿಯೊಳು ಪಾತಕಿಗಳ ಘಟ್ಟ ಹೀರುವ ಮಂತ್ರ
ಪಶುಪತಿಗೆ ಪ್ರಿಯವಾದ ದಿವ್ಯಮಂತ್ರ
ದಿಟ್ಟ ಧೃವರಾಯನಿಗೆ ಪಟ್ಟಗಟ್ಟಿದ ಮಂತ್ರ
ಶಿಷ್ಟ ವಿಭೀಷಣನ ಪೊರೆದ ಮಹಮಂತ್ರ
ಕಟ್ಟಕಡೆಯಲಿ ಅಜಮಿಳನ ಸಲುಹಿದ ಮಂತ್ರ
ಮುಟ್ಟಿ ಭಜಿಸಿದವರಿಗೆ ಮೋಕ್ಷದ ಮಂತ್ರ
ಹಿಂಡು ಭೂತವ ಕಡಿದು ತುಂಡು ಮಾಡುವ ಮಂತ್ರ
ಕೊಂಡಾಡೋ ಲೋಕಕ್ಕೆ ಪ್ರಚಂಡ ಮಂತ್ರ
ಗಂಡುಗಲಿ ಕದನ ಉದ್ದಂಡ ವಿಕ್ರಮ
ಪುಂಡರೀಕಾಕ್ಷ ಪುರಂದರವಿಟ್ಠಲನ ಮಂತ್ರ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಆರಿಗಾರಾಗುವರೊ ಆಪತ್ತು ಕಾಲಕ್ಕೆ

ಆರಿಗಾರಾಗುವರೊ ಆಪತ್ತು ಕಾಲಕ್ಕೆ
ಆರಿಗಾರೊದಗುವರೊ ಸಂಪತ್ತು ಕಾಲಕ್ಕೆ
ಆರಿಂದ ಬಪ್ಪುವುದು ಆರಿಂದ ತಪ್ಪುವುದು
ಆರಿಸಿನೋಡುವುದು ಇದರ ಕಾರಣವ ಇದ
ಕಾರು ವಾರಣ್ದಲಿ ನೋಡಿ
ಆರೋಪಿಸಲು ಎಲ್ಲ ಭಾರ ಅವಗೆ

ಕಾರುಣ್ಯಮೂರುತಿ ಗೋಪಾಲವಿಟ್ಠಲ
ಈ ರೀತಿ ಅರಿದವಗೆ ಇಲ್ಲೆ ಪೊರೆವ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಸಕಲ ಗ್ರಹಬಲ ನೀನೆ ಸರಸಿಜಾಕ್ಷ

ಸಕಲ ಗ್ರಹಬಲ ನೀನೆ ಸರಸಿಜಾಕ್ಷ
ನಿಖಿಳ ರಕ್ಷಕ ನೀನೆ ವಿಶ್ವವ್ಯಾಪಕನೆ
ರವಿ ಚಂದ್ರ ಬುಧ ನೀನೆ ರಾಹು ಕೇತುವು ನೀನೆ
ರವಿ ಗುರು ಶನಿಯು ಮಂಗಳನು ನೀನೆ
ದಿನರಾತ್ರಿಯು ನೀನೆ ನವ ವಿಧಾನವು ನೀನೆ
ಭವರೋಗ ಹರ ನೀನೆ ಭೇಷಜನ ನೀನೆ
ಪಕ್ಷಮಾಸವು ನೀನೆ ಪರ್ವಕಾಲವು ನೀನೆ
ನಕ್ಷತ್ರ ಯೋಗ ತಿಥಿಕಾರಣ ನೀನೆ
ಅಕ್ಷಯವೆಂದು ದ್ರೌಪದಿಯ ಮಾನವ ಕಾಯ್ದ
ಪಕ್ಷಿವಾಹನ ದೀನ ರಕ್ಷ್ಕನು ನೀನೆ
ಋತುವತ್ಸರವು ನೀನೆ ಮತ್ತೆ ಯುಗಾದಿಯು ನೀನೆ
ಕೃತು ಹೋಮ ಯಜ್ಞ ಸದ್ಗತಿಯು ನೀನೆ
ಜಿತವಾಗಿ ಎನ್ನೊಡೆಯ ಪುರಂದರವಿಟ್ಠಲನೆ
ಶ್ರುತಿಗೆ ಸಿಲುಕದ ಅಪ್ರತಿಮ ಮಹಿಮ ನೀನೆ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಶ್ರೀನಿವಾಸ ನೀನೆ ಪಾಲಿಸೋ ಶ್ರೀತ ಜನ ಪಾಲ

ಶ್ರೀನಿವಾಸ ನೀನೆ ಪಾಲಿಸೋ ಶ್ರೀತ ಜನ ಪಾಲ
ಗಾನಲೋಲ ಶ್ರೀಮುಕುಂದನೆ
ಧ್ಯಾನ ಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಪ
ವೇಣು ಗೊಪಾಲ ಮುಕುಂದ ವೇದ ವೇದ್ಯ ನಿತ್ಯಾನಂದ
ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸಿಖ
ಎಂದಿಗೆ ಲಭ್ಯವೊ ಮಾಧವ ಅಂಧ ಕಾರದಲ್ಲಿ ನಿಂದು ತತ್ತರಿಸುತಿಹೆನೊ
ಅಂದದಿ ಭಾವಾಬ್ದಿಯೊಳು ಮಿಂದು ನೊಂದೆನೊ ಮುಕುಂದಾ
ಎಷ್ಟು ದಿನ ಪಡುವದೊ ಯಶೋಧೆಯ ಕಂದ
ದೃಷ್ಟಿಯಿಂದ ನೋಡಲಾಗದೆ ಮುಟ್ಟಿ ನಿನ್ನ ಭಜಿಸಲಾರೆ ಕೆಟ್ಟ ನರ ಜನ್ಮದವ
ದುಷ್ಟಕಾರ್ಯ ಮಾಡಿದಾಗ್ಯೂ ಇಷ್ಟನಾಗಿ ಕೈಯ ಪಿಡಿದು
ಅನುದಿನ ಅನೇಕ ರೋಗಂಗಳ ಅನುಭವಿಸುವೆನು
ಘನ ಮಹಿಮನೆ ಕೇಳಯ್ಯ ತನುವಿನಲಿ ಬಲವಿಲ್ಲ
ನೆನೆದ ಮಾತ್ರ ಸಲಹುವ ಹನುಮದೀಶ
ಪುರಂದರವಿಟ್ಠಲನೆ ಕೈಯ ಪಿಡಿದು

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ತೇಲಿಸೋ ಇಲ್ಲ ಮುಳುಗಿಸೋ

ತೇಲಿಸೋ ಇಲ್ಲ ಮುಳುಗಿಸೋ
ನಿನ್ನ ಕಾಲಿಗೆ ಬಿದ್ದೆನೊ ಪರಮ ಕೃಪಾಳೋ
ಸತಿಸುತ ಧನದಾಸೆ ಎಂದೆಂಬ ಮೋಹದಿ
ಹಿತದಿಂದ ಅತಿನೊಂದು ಬೆಡಾದೆನೊ
ಗತಿ ಕೊಡುವರ ಕಾಣೆ ಮತಿಯ ಪಾಲಿಸೊ ಲಕ್ಷ್ಮಿ
ಪತಿ ನಿನ್ನ ಚರಣದ ಸ್ಮರಣೆಯಿತ್ತೆನಗೆ

ಜರೆರೋಗ ದಾರಿದ್ರ್ಯ ಕಲ್ಮಶವೆಂಬ
ಶರಧಿಯೊಳಗೆ ಬಿದ್ದು ಮುಳುಗಿದೆನೋ
ಸ್ಥಿರವಲ್ಲ ದೇಹವು ನೆರೆ ನಂಬಿದೆ ನಿನ್ನ
ಕರುಣಾಭಯವಿತ್ತು ಪಾಲಿಸೋ ಹರಿಯೇ
ದೋಷ್ವುಳವ ನಾನು ಭಾಷೆಯುಳ್ಳವ ನೀನು
ವೋಸ ಹೋದೆನೊ ಭಕ್ತಿರಸವ ಬಿಟ್ಟು
ಶೇಷ್ಶಯನ ಶ್ರೀಪುರಂದರ ವಿಟ್ಠಲನೆ
ದಾಸರ ಸಂಗವಿತ್ತು ಪಾಲಿಸೊ ಹರಿಯೇ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ಯಾದವ ನೀ ಬಾ ಯದುಕುಲ ನಂದನ

ಯಾದವ ನೀ ಬಾ ಯದುಕುಲ ನಂದನ
ಮಾಧವ ಮಧುಸೂದನ ಬಾರೇ
ಸೋದರ ಮಾವನ ಮಧುರೆಲಿ ಮಡುಹಿದಯ
ಯಶೋಧೆ ನಂದನ ನೀ ಬಾರೋ
ಶಂಖ ಚಕ್ರವು ಕೈಯಲ್ಲಿ ಹೊಳೆಸುತ
ಬಿಂಕದ ಗೋಪಾಲ ನೀ ಬಾರೋ
ಅಕಳಂಕ ಮಹಿಮನೆ ಆದಿ ನಾರಾಯಣ
ಬೇಕೆಂಬ ಭಕ್ತರಿಗೊಲಿ ಬಾರೋ
ಕಣಕಾಲಂದುಗೆ ಘುಲು ಘುಲು ರೆನುತಲಿ ಝುಣ್ಝುಣ ವೇಣು ನಾದದಲಿ
ಚಿಣಿಕೋಲು ಚೆಂಡು ಬುಗುರೆ ಯನಾಡುತ
ಸಣ್ಣ ಸಣ್ಣ ಗೋಪಾಲರೊಡಗೂಡಿ
ಖಗವಾಹನನೆ ಬಗೆ ಬಗೆ ರೂಪ
ನಗೆ ಮೊಗದರಸನೆ ನೀ ಬಾರೋ
ಜಗದೊಳು ನಿನ್ನಯ ಮಹಿಮೆಯ ಪೊಗಳುವೆ
ಪುರಂದರವಿಟ್ಠಲ ನೀ ಬಾರೋ

। ಶ್ರೀ ಕೃಷ್ಣಾರ್ಪಣ ಮಸ್ತು ।

। ಹರಿಃ ಓಂ ।

## ತಿರುಪತಿ  ವೆಂಕಟರಮಣಾ ನಿನಗೇತಕೆ ಬಾರದು ಕರುಣಾ

ತಿರುಪತಿ  ವೆಂಕಟರಮಣಾ ನಿನಗೇತಕೆ ಬಾರದು ಕರುಣಾ
ನಂಬಿದೆ ನಿನ್ನಯ ಚರಣಾ ಪರೊಪಾಲಿಸಬೇಕೋ ಕರುಣಾ
ಅಳಗಿರಿಯಲಿ ಬಂದ ಸ್ವಾಮಿ ಅಂಜನಗಿರಿಯಲಿ ನಿಂದ
ಕೊಳಲು ಧ್ವನಿ ಯದೋ ಚಂದ ನಮ್ಮ ಕುಂಡಲ ರಾಯ ಮುಕುಂದ
ಬೇಟೆಯಾಡುತ್ತ ಬಂದ ಸ್ವಾಮಿ ಬೆಟ್ಟದ ಮೇಲೆ ನಿಂದಾ
ಮೀಟುಗಾರ ಗೋವಿಂದಾ ಅಲ್ಲಿ ಜೇನು ಸಕ್ಕರೆಯನು ತಿಂದಾ
ಮೂಡಲಗಿರಿಯಲಿ ನಿಂತಾ ಮುದ್ದು ವೆಂಕಟಪತಿ ಬಲವಂತಾ
ಈಡಿಲ್ಲ ನಿನಗೆ ಶ್ರೀಕಾಂತಾ ಈರೇಳು ಲೋಕಕನಂತಾ
ಆಡಿದರೆ ಸ್ಥಿರವಪ್ಪ ಅಬದ್ಧಗಳಾಡಲು ಒಪ್ಪ ಬೇಡಿದ ಮರಗಳನಿಪ್ಪ
ನಮ್ಮ ಮುಡಲಗಿರಿ ತಿಮ್ಮಪ್ಪ
ಅಪ್ಪವು ಅತಿ ರಸಮೆದ್ದ ಸ್ವಾಮಿ ಅಸುರರ ಕಾಲಲಿ ಒದ್ದ
ಸತಿಯ ಕೂಡಾಡುತಲಿದ್ದ ಸ್ವಾಮಿ ಸಕಲ ದುರ್ಜನರ ಗೆದ್ದ
ಬಗೆ ಬಗೆ ಭಕ್ಷ್ಯ ಪರಮಾನ್ನ ನಾನಾ ಬಗೆಯ ಸಕಲ ಶಾಲ್ಯನ್ನ
ಬಗೆ ಬಗೆಯ ಸೊಬಗು ಮೋಹನ್ನ ನಮ್ಮ ನಗುಮುಖದ ಸುಪ್ರಸನ್ನ
ಕಾಶೀ ರಾಮೇಶ್ವರದಿಂದ ಅಲ್ಲಿ ಕಾಣಿಕೆ ಬರುವುದು ಚೆಂದ
ದಾಸರ ಕೂಡೆ ಗೋವಿಂದ ಅಲ್ಲಿ ದಾರಿ ನಡೆವುದೆ ಚಂದ
ಎಲ್ಲಾ ದೇವರ ಗಂಡ ಅವ ಚಿಲ್ಲರೆ ದೈವದ ಮಿಂಡ
ಬಲ್ಲಿದವರಿಗೆ ಉದ್ದಂಡ ಶಿವ ಬಿಲ್ಲ ಮುರಿದ ಪ್ರಚಂಡ
ಕಾಸು ತಪ್ಪಿದರೆ ಪಟ್ಟಿ ಬಡ್ಡಿ ಕಾಸು ಬಿಡದೆ ಗಂಟುಕಟ್ಟಿ
ದಾಸನೆಂದರೆ ಬಿಡಗಟ್ಟಿ ನಮ್ಮ ಕೇಸಕ್ಕಿ ತಿಮ್ಮಪ್ಪ ಶೆಟ್ಟಿ
ದಾಸರ ಕಂಡರೆ ಪ್ರಾಣ ತಾ ಧರೆಯೊಳಗಧಿಕ ಪ್ರವೀಣ
ದ್ವೇಷಿಯ ಗಂಟಲ ಗಾಣ ನಮ್ಮ ದೇವರಿಗೆ ನಿತ್ಯ ಕಲ್ಯಾಣ
ಮೋಸ ಹೋಗುವವನಲ್ಲಯ್ಯ ಒಂದು ಕಾಸಿಗೆ ಒಡ್ಡುವ ಕೈಯ
ಏಸು ಮಹಿಮೆಯಗಾರನಯ್ಯ ನಮ್ಮ ವಾಸುದೇವ ತಿಮ್ಮಯ್ಯ
ಚಿತ್ತವ ಧಾನ ಪರಾಕು ನಿನ್ನ ಚಿತ್ತದ ದಯ ಒಂದೇ ಸಾಕು
ಸತ್ಯವಾಹಿನಿ ನಿನ್ನ ವಾಕ್ಕು ನೀನು ಸಕಲ ಜನರಿಗೆ ಬೇಕು
ಅಲ್ಲಿದೆ ಪರಿಷೆಯಗುಂಪು ಮತ್ ಅಲ್ಲಲ್ಲಿ ತೋಪಿನ ತಂಪು ಅಲ್ಲಲ್ಲಿ ಸೊಗಸಿನ ಸೊಂಪು

ಮತ್ತಲ್ಲಲಿ ಪರಿಮಳದಿಂಪು
ಅಲ್ಲಲ್ಲಿ ಜನಗಳ ಕೂಟ ಮತ್ತಲ್ಲಲ್ಲಿ ಬ್ರಹ್ಮಣರೂಟ
ಅಲ್ಲಲ್ಲಿ ಪಿಡಿದ ಕೋಲಾಟಾ ಮತ್ತಲ್ಲಿಂದ ಊರಿಗೆ ಓಟ
ಪಾಪ ವಿನಾಶಿನಿ ಸ್ನಾನ ಹರಿ ಪಾದೋದಕವೇ ಪಾನ
ಕೋಪ ತಾಪಗಳ ನಿಧಾನ ನಮ್ಮ ಪುರಂದರವಿಟ್ಠಲನ ಧ್ಯಾನ

। ಶ್ರೀ ಕೃಷ್ಣಾರ್ಪಣ ಮಸ್ತು ।